**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ಪ್ರಕಾಶ ಹೆಚ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹುಲಿಕುಂಟೆ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ದೂರಿನ ಕುರಿತು.

**ಓದಲಾಗಿದೆ:** ಮಾನ್ಯ ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: D.O.No.Compt/BD/2120/2016/ARLO-2 ದಿನಾಂಕ: 27-07-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 18-07-2017ರ ವರದಿಯಲ್ಲಿ ಶ್ರೀಮತಿ ವಸಂತ ಕೋಂ ರೇಣುಕಾಮೂರ್ತಿ, ಕಸಘಟ್ಟ ಗ್ರಾಮ, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ ಪ್ರಕಾಶ್. ಹೆಚ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲಿಕುಂಟೆ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು, ಕಸಘಟ್ಟ ಗ್ರಾಮದಲ್ಲಿ ನಿವೇಸನ ಸಂ.3 ನ್ನು ದೂರುದಾರರು ದಿನಾಂಕ:21.10.2006 ರಂದು ನೋಂದಾಯಿತಿ ಕ್ರಯಪತ್ರ ಮಾಡಿಕೊಂಡಿದ್ದು, ಆ ಪ್ರಕಾರ ಗ್ರಾಮ ಪಂಚಾಯಿತಿಯಲ್ಲಿ ಅವರ ಹೆಸರಿನಲ್ಲಿ ಖಾತೆ ಮಾಡಲಾಗಿರುತ್ತದೆ. ಈ ನಿವೇಶನಕ್ಕೆ ಬಸವ ವಸತಿ ಯೋಜನೆಯಡಿಯಲ್ಲಿ ಹಣ ಮಂಜೂರಾಗಿದ್ದು, ಅಲ್ಲಿ ಮನೆ ಕಟ್ಟಡ ಪ್ರಾರಂಭವಾಗಿದ್ದು, 3 ಹಂತದ ಬಿಲ್‌ಗಳನ್ನು ಪಡೆಯಲಾಗಿದೆ. ಆದರೆ ಈ ಹಂತದಲ್ಲಿ ಎದುರುದಾರರು ಪಂಚಾಯಿತಿ ಸದಸ್ಯರೊಂದಿಗೆ ಶಾಮೀಲಾಗಿ ದೂರುದಾರರ ನಿವೇಶನದ ಉತ್ತರಕ್ಕೆ ರಸ್ತೆ ಇದ್ದರೂ ಸಹ ಬೇರೊಬ್ಬರಿಗೆ ಮಾಡಿಕೊಡಲು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ವಿಚಾರಿಸಿದಾಗ ರಾಜಿ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮ್ಮ ಮನೆಯ ಉತ್ತರದ ಕಡೆ 6 ಅಡಿ ಜಾಗವನ್ನು ಒತ್ತುವರಿ ಮಾಡಿದ್ದು, ಈ ಬಗ್ಗೆ ಅವರಿಗೆ ತಿಳುವಳಿಕೆ ಪತರ ನೀಡಲಾಗಿದೆ. ದೂರುದಾರರ ನಿವೇಶನದ ಉತ್ತರ ದಿಕ್ಕಿಗೆ ಮತ್ತು ರಸ್ತೆ ನಡುವೆ 40*25 ಅಡಿ ವಿಸ್ತೀರ್ಣದ ಖಾಲಿ ನಿವೇಶನವಿದೆ. ಗ್ರಾಮದ ಅಂಗವಿಕಲರು ಮತ್ತು ಅನಾಥರಾದ ಶ್ರೀಮತಿ ರುದ್ರಾಣಮ್ಮ ಅವರಿಗೆ ಅಂಗವಿಕಲ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಮನೆ ಕಟ್ಟಿಕೊಳ್ಳಲು ಅವರಿಗೆ ಯಾವುದೇ ಸ್ಥಳವಿಲ್ಲದ ಕಾರಣ ಗ್ರಾಮ ಪಂಚಾಯಿತಿ ಸದಸ್ಯರ ಮತ್ತು ಗ್ರಾಮದ ಜನರ ಬೇಡಿಕೆಯಂತೆ ಸದರಿ ಖಾಲಿ ನಿವೇಶನವನ್ನು ಅವರಿಗೆ ಕೊಡಲು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮಕ್ಕೆ ತಾಲ್ಲೂಕು ಕಛೇರಿಗೆ ಪತ್ರ ಬರೆಯಲು ತೀರ್ಮಾನಿಸಿದೆ. ರುದ್ರಾಣಮ್ಮ ಅಂಗವಿಕಲಳಾಗಿರುವುದರಿಂದ ಅವರಿಗೊಂದು ನೆಲೆ ಕಲ್ಪಿಸಲು ಸಹಕರಿಸಬೇಕಾಗಿ ಮತ್ತು ಈ ದೂರನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ರುದ್ರಾಣಮ್ಮನವರಿಗೆ ತಾಯಿ, ಸಹೋದರ-ಸಹೋದರಿಯವರು ಇದ್ದು ಸದರಿ ಗ್ರಾಮದಲ್ಲಿ ಮನೆ ಇರುತ್ತದೆ. ಇವರಿಗೆ ಆಶ್ರಯ ಕಾಲೋನಿಯ ಪಕ್ಕದಲ್ಲಿ 10 ಗುಂಟೆ ಜಮೀನಿದ್ದು ಅವರ ತಂದೆಯ ಹೆಸರಿನಲ್ಲಿ ಸಹ ಜಮೀನಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಕಸಘಟ್ಟ ಗ್ರಾಮದಲ್ಲಿರುವ ನಿವೇಶನ ಸಂ.3 ಈ ಮೊದಲು ಓಲಯ್ಯ ಎನ್ನುವವರಿಗೆ ದಿನಾಂಕ: 19.12.1991 ರಂದು ಆಶ್ರಯ ಯೋಜನೆಯಡಿಯಲ್ಲಿ ನೀಡಲಾಗಿದ್ದು, ಅದನ್ನು ದೂರುದಾರರು ದಿನಾಂಕ: 21.10.2006 ರಂದು ನೋಂದಾಯಿತಿ ಕ್ರಯಪತ್ರದ ಮೂಲಕ ಕ್ರಯಮಾಡಿಕೊಂಡಿರುತ್ತಾರೆ. ಈ ಹಕ್ಕುಪತ್ರವನ್ನು ಪರಿಶೀಲಿಸಿದಾಗ ನಿವೇಶನ ಸಂ.3 ರ ಚೆಕ್

ಬಂದಿ ಪೂರ್ವಕ್ಕೆ – ನಿವೇಶನ ಸಂ.4, ಪಶ್ಚಿಮಕ್ಕೆ–ರಸ್ತೆ, ದಕ್ಷಿಣಕ್ಕೆ–ನಿವೇಶನ ಸಂ.8 ಎಂದು ನಮೂದಿಸಿಲಾಗಿದೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉತ್ತರ ದಿಕ್ಕಿಗೆ ನಿವೇಶನ ಸಂ.3 ಮತ್ತು ರಸ್ತೆ ನಡುವೆ 40*25 ಅಡಿ ಖಾಲಿ ನಿವೇಶನವಿದೆಯೆಂದು ನಮೂದಿಸಿರುತ್ತಾರೆ. ಅಂದರೆ ಹಕ್ಕುಪತ್ರದಲ್ಲಿ ಉತ್ತರಕ್ಕೆ ರಸ್ತೆ ಎಂದು ನಮೂದಿಸಿದ್ದರೂ ಸಹ ಎದುರುದಾರರು ರಸ್ತೆ ಮತ್ತು ನಿವೇಶನದ ಮಧ್ಯೆ ಖಾಲಿ ಜಾಗವಿದೆಯೆಂದು ನಮೂದಿಸಿದ್ದು ಅದಕ್ಕೆ ಯಾವುದೇ ಪೂರಕ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಎದುರುದಾರರು ಗ್ರಾಮ ಪಂಚಾಯಿತಿಯ ನಿವೇಶನಗಳ ಉಸ್ತುವಾರಿ ಮತ್ತು ಸಂಪೂರ್ಣ ದಾಖಲೆಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದ್ದು, ಆದರೆ 1991 ರಲ್ಲಿ ನೀಡಿದ ಹಕ್ಕುಪತ್ರದ ಚೆಕ್‌ಬಂದಿಯು ಅಂತಿಮವಾಗಿದ್ದು, ಅದನ್ನು ಎದುರುದಾರರು ಅಲ್ಲಗಳೆದು ಅಲ್ಲಿ ಬೇರೊಬ್ಬರಿಗೆ ನಿವೇಶನ ಕಲ್ಪಿಸಲು ಹೊರಟಿದ್ದು, ಅಧಿಕಾರ ದುರುಪಯೋಗವೆನಿಸುತ್ತದೆ. ಶ್ರೀಮತಿ ರುದ್ರಾಣಮ್ಮ ಅವರು ಅಂಗವಿಕಲರು ಮತ್ತು ಅನಾಥರಾಗಿದ್ದು ಅವರಿಗೆ ನೆಲೆ ಕಲ್ಪಿಸುವ ಉದ್ದೇಶದಿಂದ ಈ ನಿವೇಶನ ನೀಡಲು ತೀರ್ಮಾನಿಸಲಾಯಿತೆಂದು ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುವುದನ್ನು ಒಪ್ಪತಕ್ಕದಲ್ಲ. ಏಕೆಂದರೆ ದೂರುದಾರರು ಕಾನೂನು ಪ್ರಕಾರ ನಿವೇಶನವನ್ನು ಕ್ರಯ ಮಾಡಿಕೊಂಡಿದ್ದು. ಅದರ ಚೆಕ್‌ಬಂದಿ ಪ್ರಕಾರ ಉತ್ತರಕ್ಕೆ ರಸ್ತೆ ಇರುವುದರಿಂದ ಅಲ್ಲಿ ಎದುರುದಾರರು ತಿಳಿಸಿರುವಂತೆ ಬೇರೆಯವರಿಗೆ ನಿವೇಶನ ನೀಡಲು ಆಗುವುದಿಲ್ಲ. ದೂರುದಾರರ ನಿವೇಶನ ಸಂ.3ರ ಉತ್ತರಕ್ಕೆ ರಸ್ತೆ ಅಂತ ದಾಖಲೆಗಳಲ್ಲಿ ಸ್ಪಷ್ಟವಾಗಿದ್ದರೂ ಸಹ ಎದುರುದಾರರು ಅದನ್ನು ಅಲ್ಲಗಳೆದು ಬೇರೊಬ್ಬರಿಗೆ ಅಲ್ಲಿ ನಿವೇಶನ ಕಲ್ಪಸಲು ಪ್ರಯತ್ನಿಸಿರುವುದರಿಂದ ಅವರು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದ್ದರಿಂದ, ಎದುರುದಾರರಾದ ಶ್ರೀ ಪ್ರಕಾಶ್. ಹೆಚ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲಿಕುಂಟೆ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ ನಿಯಮಗಳು 1957 ರ ನಿಯಮ 14–ಎ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/636/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 09–08–2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಪ್ರಕಾಶ್. ಹೆಚ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲಿಕುಂಟೆ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ:</u>**

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 45 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
6. ಶ್ರೀ ಪ್ರಕಾಶ್. ಹೆಚ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲಿಕುಂಟೆ ಗ್ರಾಮ ಪಂಚಾಯಿತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.